**<u>1ನೇ ಅಪರ ಜಿಲ್ಲಾ ಮತ್ತು ಸತ್ರ ನ್ಯಾಯಾಲಯ, ರಾಮನಗರ</u>**

**<u>S.C.68/2017</u>**

ದಿನಾಂಕ 26.03.2026
(ಸಾಕ್ಷಿಗೆ ಪ್ರಮಾಣವಚನವನ್ನು ಬೋಧಿಸಲಾಯಿತು)

ಚಾಸಾ - 35 ಪ್ರಾಸಾ - 20

| | | |
|---|---|---|
| ಹೆಸರು | ಃ | ಮಂಜುನಾಥ್ ಬಿಆರ್ |
| ತಂದೆಯ ಹೆಸರು | ಃ | ರಾಜಪ್ಪ |
| ವಯಸ್ಸು | ಃ | 41 ವರ್ಷ |
| ಉದ್ಯೋಗ | ಃ | ಪಿಐ, ಡಿಜಿ ಕಛೇರಿ |
| ವಾಸಸ್ಥಳ | ಃ | ಬೆಂಗಳೂರು |

**<u>ಮುಖ್ಯ ವಿಚಾರಣೆಃ ಸರ್ಕಾರಿ ಅಭಿಯೋಜಕರಿಂದಃ</u>**

ದಿನಾಂಕ 20.06.2016 ರಿಂದ 20.10.2017 ರವರೆಗೆ ನಾನು ಪಿಎಸ್ಐ ಆಗಿ ಮಾಗಡಿ ಪೊಲೀಸ್ ಠಾಣೆಯಲ್ಲಿ ಕರ್ತವ್ಯ ನಿರ್ವಹಿಸಿರುತ್ತೇನೆ.

2. ದಿನಾಂಕ 02.03.2017 ರಂದು ಬೆಳಿಗ್ಗೆ 9 ಗಂಟೆ ಸಮಯದಲ್ಲಿ ಮಹಮದ್ ನೂರ್ ಉಲ್ಲಾ ಎಂಬ ವ್ಯಕ್ತಿ ಠಾಣೆಗೆ ಹಾಜರಾಗಿ ನೀಡಿದಂತಹ ದೂರನ್ನು ಸ್ವೀಕರಿಸಿಕೊಂಡು ಗುನ್ನೆಯನ್ನು ಕ್ರೈಂ ನಂ.40/2017 ರಲ್ಲಿ ದಾಖಲಿಸಿಕೊಂಡೆ. ಸದರಿ ದೂರು ನಿಶಾನೆ ಪಿ 1 ಇದ್ದು, ಅದನ್ನು ಸ್ವೀಕರಿಸಿದ ಸಲುವಾಗಿ ಸಾಕ್ಷಿ ಗುರುತಿಸಿರುವ ತನ್ನ ಸಹಿಯನ್ನು ನಿಶಾನೆ ಪಿ 1(ಬಿ) ಎಂದು ಗುರುತಿಸಲಾಯಿತು. ಸದರಿ ದೂರಿಗೆ ಸಂಬಂಧಿಸಿದ ಪ್ರ.ವ.ಮಾ.ಯನ್ನು ದಾಖಲು ಮಾಡಿಕೊಂಡು ನ್ಯಾಯಾಲಯಕ್ಕೆ ಕಳುಹಿಸಿಕೊಟ್ಟಿರುತ್ತೇನೆ. ಸದರಿ ಪ್ರ.ವ.ಮಾಹಿತಿಯನ್ನು ಸಾಕ್ಷಿ ನೋಡಿ ಗುರುತಿಸಿದ್ದು ಅದನ್ನು ನಿಶಾನೆ ಪಿ 25 ಹಾಗೂ ಸಾಕ್ಷಿಯ ಸಹಿಯನ್ನು ನಿಶಾನೆ ಪಿ 25(ಎ) ಎಂದು ಗುರುತಿಸಲಾಯಿತು.

3. ಅದೇ ದಿನ ಕೃತ್ಯದ ಸ್ಥಳಕ್ಕೆ ಭೇಟಿ ನೀಡಿ ಪಿರ್ಯಾದಿ ತೋರಿಸಿದಂತಹ ಸ್ಥಳದಲ್ಲಿ ಬೆಳಿಗ್ಗೆ 11.45 ರಿಂದ 12.30 ರ ಸಮಯದಲ್ಲಿ ಪಂಚರಾದ ಇಲಿಯಾಸ್ ಖಾನ್ ಮತ್ತು ಮಹಮದ್ ಜಿಯಾ ರವರ ಅವರ ಸಮಕ್ಷಮದಲ್ಲಿ ನಿಶಾನೆ ಪಿ 5 ರ ಮಹಜರ್ ತಯಾರಿಸಲಾಗಿದೆ.

4. ದಿನಾಂಕ 03.03.2017 ರಂದು ಮಾಗಡಿ ನಗರದಲ್ಲಿ ಮಗುವಿನ ಮೃತ ದೇಹವೊಂದು ಇದೆ ಎಂದು ಮಾಹಿತಿ ಬಂದಿದ್ದರ ಅನ್ವಯ ಸಂಜೆ ಸುಮಾರು 4.30 ರ ಸಮಯದಲ್ಲಿ ಸ್ಥಳಕ್ಕೆ ಹೋದಾಗ ಪಿರ್ಯಾದುದಾರುನಾದ ಮಹಮದ್ ನೂರ್ ಉಲ್ಲಾ ಅಲ್ಲಿ ಬಂದಿದ್ದು, ಆತ ಸದರಿ ಮೃತ ದೇಹವನ್ನು ನೋಡಿ ಅದು ತನ್ನ ಮಗು ಎಂದು ಗುರುತಿಸಿ ಮತ್ತೊಂದು ದೂರನ್ನು ನೀಡಿರುತ್ತಾನೆ. ಸದರಿ ದೂರನ್ನು ಸ್ವೀಕರಿಸಿ ಮಾನ್ಯ ನ್ಯಾಯಾಲಯಕ್ಕೆ ಈಗಾಗಲೇ ಸಲ್ಲಿಸಿದ್ದ ಪ್ರಥಮ ವರ್ತಮಾನ ಕ್ಕೆ ಸಂಬಂಧಿಸಿದಂತೆ ಐಪಿಸಿ ಕಲಂ.363 ರ ಜೊತೆ 302, 201 ಐಪಿಸಿ ನ್ನು ಅಳವಡಿಸಿಕೊಳ್ಳಲು ಮಾನ್ಯ ನ್ಯಾಯಾಲಯಕ್ಕೆ ನಿವೇದಿಸಿಕೊಂಡಿರುತ್ತೇನೆ. ಸದರಿ ದೂರು ನಿಶಾನೆ ಪಿ 2 ಇದ್ದು, ಅದನ್ನು ಸ್ವೀಕರಿಸಿದ ಸಲುವಾಗಿ ಸಾಕ್ಷಿ ಗುರುತಿಸಿರುವ ತನ್ನ ಸಹಿಯನ್ನು ನಿಶಾನೆ ಪಿ 2(ಬಿ) ಎಂದು ಗುರುತಿಸಲಾಯಿತು.

5. ಮುಂದಿನ ತನಿಖೆಗಾಗಿ ಕಡತವನುನ ವೃತ್ತ ನಿರೀಕ್ಷಕರಿಗೆ ಹಸ್ತಾಂತರಿಸಿರುತ್ತೇನೆ. ಸದರಿ ವೃತ್ತ ನಿರೀಕ್ಷಕರಾದ ನಂದೀಶ್ ಚಾಸಾ 36 ರವರು ಈಗ ಮರಣ ಹೊಂದಿರುತ್ತಾರೆ. ನನ್ನ ಕರ್ತವ್ಯದ ಸಮಯದಲ್ಲಿ ಅವರ ಸಹಿಗಳನ್ನು ನಾನು ನೋಡಿರುತ್ತೇನೆ. ಅವುಗಳನ್ನು ನೋಡಿದರೆ ಗುರುತಿಸಬಲ್ಲೆ.

**ಮುಂದುವರಿದ ಮುಖ್ಯವಿಚಾರಣೆಯನ್ನು ಮಧ್ಯಾಹ್ನ 3 ಗಂಟೆಗೆ ಮುಂದೂಡಲಾಯಿತು.**

<u>**ಸಾಕ್ಷಿಯ ವಿಚಾರಣೆಯನ್ನು ಮತ್ತೆ ಪುನಃ 4.25 ಕ್ಕೆ ತೆಗೆದುಕೊಂಡು, ಸಾಕ್ಷಿಯನ್ನು ಪುನಃ ಕರೇಯಿಸಿ ಪ್ರಮಾಣ ವಚನ ಬೋದಿಸಲಾಯಿತು.**</u>

<u>**ಮುಂದುವರಿದ ಮುಖ್ಯವಿಚಾರಣೆಃ ಮಾನ್ಯ ಸರ್ಕಾರಿ ಅಭಿಯೋಜಕರವರಿಂದಃ**</u>

6. ನಿಶಾನೆ ಪಿ 3 ರಲ್ಲಿರುವ ಸಹಿ ಚಾಸಾ 36 ಅವರದ್ದಾಗಿರುತ್ತದೆ. ಸಾಕ್ಷಿ ಗುರುತಿಸಿರುವ ಸಹಿಯನ್ನು ನಿಶಾನೆ ಪಿ 3(ಬಿ) ಎಂದು ಗುರುತಿಸಲಾಯಿತು. ನಿಶಾನೆ ಪಿ 4 ರಲ್ಲಿರುವ ಸಹಿ ಸಹ ಚಾಸಾ 36 ಅವರದ್ದಾಗಿರುತ್ತದೆ. ಸಾಕ್ಷಿ ಗುರುತಿಸಿರುವ ಸಹಿಯನ್ನು ನಿಶಾನೆ ಪಿ 4(ಬಿ) ಎಂದು ಗುರುತಿಸಲಾಯಿತು. ನಿಶಾನೆ ಪಿ 9 ರಲ್ಲಿರುವ ಸಹಿ ಸಹ ಚಾಸಾ 36 ಅವರದ್ದಾಗಿರುತ್ತದೆ. ಸಾಕ್ಷಿ ಗುರುತಿಸಿರುವ ಸಹಿಯನ್ನು ನಿಶಾನೆ ಪಿ 9(ಬಿ) ಎಂದು ಗುರುತಿಸಲಾಯಿತು. ನಿಶಾನೆ ಪಿ 10 ರಲ್ಲಿರುವ ಸಹಿ ಸಹ ಚಾಸಾ 36 ಅವರದ್ದಾಗಿರುತ್ತದೆ. ಸಾಕ್ಷಿ ಗುರುತಿಸಿರುವ ಸಹಿಯನ್ನು ನಿಶಾನೆ ಪಿ 10(ಸಿ) ಎಂದು ಗುರುತಿಸಲಾಯಿತು. ನಿಶಾನೆ ಪಿ 11 ರಲ್ಲಿರುವ ಸಹಿ ಸಹ ಚಾಸಾ 36 ಅವರದ್ದಾಗಿರುತ್ತದೆ. ಸಾಕ್ಷಿ ಗುರುತಿಸಿರುವ ಸಹಿಯನ್ನು ನಿಶಾನೆ ಪಿ 11(ಬಿ) ಎಂದು ಗುರುತಿಸಲಾಯಿತು. ನಿಶಾನೆ ಪಿ 15 ರಲ್ಲಿರುವ ಸಹಿ ಸಹ ಚಾಸಾ 36 ಅವರದ್ದಾಗಿರುತ್ತದೆ. ಸಾಕ್ಷಿ ಗುರುತಿಸಿರುವ ಸಹಿಯನ್ನು ನಿಶಾನೆ ಪಿ 15(ಬಿ) ಎಂದು ಗುರುತಿಸಲಾಯಿತು. ನಿಶಾನೆ ಪಿ 16 ರಲ್ಲಿರುವ ಸಹಿ ಸಹ ಚಾಸಾ 36 ಅವರದ್ದಾಗಿರುತ್ತದೆ. ಸಾಕ್ಷಿ ಗುರುತಿಸಿರುವ ಸಹಿಯನ್ನು ನಿಶಾನೆ ಪಿ 16(ಬಿ) ಎಂದು ಗುರುತಿಸಲಾಯಿತು. ನಿಶಾನೆ ಪಿ 17 ರಲ್ಲಿರುವ ಸಹಿ ಸಹ ಚಾಸಾ 36 ಅವರದ್ದಾಗಿರುತ್ತದೆ. ಸಾಕ್ಷಿ ಗುರುತಿಸಿರುವ ಸಹಿಯನ್ನು ನಿಶಾನೆ ಪಿ 17(ಬಿ) ಎಂದು ಗುರುತಿಸಲಾಯಿತು. ನಿಶಾನೆ ಪಿ 19 ರಲ್ಲಿರುವ ಸಹಿ ಸಹ ಚಾಸಾ 36 ಅವರದ್ದಾಗಿರುತ್ತದೆ. ಸಾಕ್ಷಿ ಗುರುತಿಸಿರುವ ಸಹಿಯನ್ನು ನಿಶಾನೆ ಪಿ 19(ಬಿ) ಎಂದು

ಗುರುತಿಸಲಾಯಿತು. ನಿಶಾನೆ ಪಿ 20 ರಲ್ಲಿರುವ ಸಹಿ ಸಹ ಚಾಸಾ 36 ಅವರದ್ದಾಗಿರುತ್ತದೆ. ಸಾಕ್ಷಿ ಗುರುತಿಸಿರುವ ಸಹಿಯನ್ನು ನಿಶಾನೆ ಪಿ 20(ಬಿ) ಎಂದು ಗುರುತಿಸಲಾಯಿತು.

**ವಾಟೀ ಸವಾಲುಃ ಶ್ರೀ.ಎಂ.ಎಂ., ವಕೀಲರಿಂದ ಆರೋಪಿಗಳ ಪರವಾಗಿಃ**

7. ಪಿರ್ಯಾದುದಾರ ಕೊಟ್ಟಂತಹ ಎರಡು ದೂರಗಳಲ್ಲಿಯೂ ಸಹ ಆರೋಪಿಗಳ ಹೆಸರು ನಮೂದಾಗಿಲ್ಲ ಎಂದರೆ ಸರಿ. ಅದೇ ರೀತಿ ಪ್ರಥಮ ವರ್ತಮಾನ ಮಾಹಿತಿಯಲ್ಲಿಯೂ ಸಹ ಅವರ ಹೆಸರಿಲ್ಲ ಎಂದರೆ ಸರಿ. ಚಾಸಾ 36 ಅವರ ಸಹಿಯನ್ನು ಮಾತ್ರ ನಾನು ಗುರುತಿಸಿದ್ದು, ಅವರ ತನಿಖಾ ದಾಖಲಾತಿಗಳ ಬಗ್ಗೆ ನನಗೆ ವೈಯಕ್ತಿಕ ಮಾಹಿತಿ ಇಲ್ಲ.

ಮರುವಿಚಾರಣೆಃ ಇಲ್ಲ.
(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆಯನ್ನು ನನ್ನ ಉಕ್ತಲೇಖನದ ಮೇರೆಗೆ ಬೆರಳಚ್ಚು ಮಾಡಲಾಯಿತು)

**ಓ.ಹೇ.ಕೇ.ಸರಿ ಇದೆ ಎಂದು ಸಾಕ್ಷಿ ಒಪ್ಪಿದ್ದಾರೆ**

**(ಪಂಚಾಕ್ಷರಿ.ಎಂ.)**
**1ನೇ ಅಪರ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು/**
**ವಿಶೇಷ ನ್ಯಾಯಾಧೀಶರು,**
**ರಾಮನಗರ.**